21.08.2026 ರ ಜೊತೆಗೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಓದಿಕೊಳ್ಳಬೇಕು ಮತ್ತು ಖಂಡ 5 (1) ರಲ್ಲಿ ನಿರ್ದಿಷ್ಟಪಡಿಸಿದ ಸೀಮಿತ ಅವಧಿಗೆ ಮಾತ್ರ ಇದು ಜಾರಿಯಲ್ಲಿರಬೇಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ.

**PR-383**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಮೂನೆ 16ಎಯ ಮರುವಿನ್ಯಾಸ ಮತ್ತು ಪರಿಷ್ಕರಣೆ.

**ಪ್ರಸ್ತಾವನೆ:-**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ಉಪಬಂಧಗಳ ಅಡಿಯಲ್ಲಿ ಹಕ್ಕುಗಳ ದಾಖಲೆಯನ್ನು ನಿರ್ವಹಿಸಲಾಗುತ್ತಿರುವುದರಿಂದ;

ಮತ್ತು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು, 2022ಕ್ಕೆ ಅನುಸಾರವಾಗಿ ಸದರಿ ನಿಯಮಗಳ ಅಡಿಯಲ್ಲಿ ಅಧಿಸೂಚಿತವಾದ ಗ್ರಾಮಗಳು ಅಥವಾ ಪ್ರದೇಶಗಳಲ್ಲಿ ಬಳಸಲು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 58, 62ರ ಅಡಿಯಲ್ಲಿ ನಮೂನೆ 16 ಅಥವಾ ನಮೂನೆ 16ಎ ಅನ್ನು ಈಗಾಗಲೇ ನಿಗದಿಪಡಿಸಿರುವುದರಿಂದ;

ಮತ್ತು ಭೂ ದಾಖಲೆಗಳ ಡಿಜಿಟಲೀಕರಣ, ಇಲಾಖೆಯ ವಿವಿಧ ಅಧಿಕೃತ ಡೇಟಾಬೇಸ್‌ಗಳ (ದತ್ತಾಂಶ) ಏಕೀಕರಣ ಮತ್ತು ಆಧಾರ್ ಜೋಡಣೆಯಲ್ಲಿ ಇಲಾಖೆಯು ಗಣನೀಯ ಪ್ರಗತಿಯನ್ನು ಸಾಧಿಸಿದ್ದು, ಇದರಿಂದಾಗಿ ದಾಖಲಾದ ಹಿಡುವಳಿದಾರರು ಮತ್ತು ತುಂಡು ಜಮೀನುಗಳ ಗುರುತಿಸುವಿಕೆ, ದೃಢೀಕರಣ ಮತ್ತು ಪರಿಶೀಲನೆಯು ಸುಧಾರಿಸಿರುವುದು. ಹಕ್ಕುಗಳ ದಾಖಲೆಯ ಪಾರದರ್ಶಕತೆ, ನಿಖರತೆ, ವಿಶ್ವಾಸಾರ್ಹತೆ ಮತ್ತು ಸಮಗ್ರತೆಯನ್ನು ಹೆಚ್ಚಿಸುವ ಸಲುವಾಗಿ, ಅನ್ವಯವಾಗುವ ಕಾನೂನು ಮತ್ತು ನಿಗದಿತ ಸುರಕ್ಷತಾ ಕ್ರಮಗಳಿಗೆ ಒಳಪಟ್ಟು ಪರಿಷ್ಕೃತ ನಮೂನೆ 16-ಎ ನಲ್ಲಿ ಈ ಎಲ್ಲಾ ಅಂಶಗಳನ್ನು ಅಳವಡಿಸುವುದು ಅವಶ್ಯಕವೆಂದು ಪರಿಗಣಿಸಲಾಗಿರುವುದರಿಂದ;

ಮತ್ತು ಇಲಾಖೆಯು ಆಕಾರ್‌ಬಂದ್, ಭೂನಕ್ಷೆಗಳು (ಕ್ಯಾಡಸ್ಟ್ರಲ್ ಮ್ಯಾಪ್), ಸರ್ವೆ ನಕ್ಷೆಗಳು ಮತ್ತು ಇತರ ಭೌಗೋಳಿಕ ಭೂ ದಾಖಲೆಗಳ ಡಿಜಿಟಲೀಕರಣ ಮತ್ತು ಏಕೀಕರಣವನ್ನು ಸಹ